**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 23/2023**

ಫ್ರಾಸಾ- 4

ಚಾಸಾ- 5

| | | |
|---|---|---|
| ಸಾಕ್ಷಿದಾರರ ಹೆಸರು | : | ಲೋಹಿತ್ ಎ.ಆರ್ |
| ತಂದೆಯ ಹೆಸರು | : | ರಮೇಶ್ |
| ವಯಸ್ಸು | : | 40 ವರ್ಷ |
| ವೃತ್ತಿ | : | ಅರಣ್ಯ ರಕ್ಷಕ ಶನಿವಾರಸಂತೆ ವಲಯ. |
| ವಾಸ | : | ಮಡಿಕೇರಿ. |

ಸಾಕ್ಷಿಯನ್ನು ದಿನಾಂಕ **23-08-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

ನಾನು ಕಳೆದ 12 ವರ್ಷಗಳಿಂದ ಅರಣ್ಯ ರಕ್ಷಕನಾಗಿ ಶನಿವಾರಸಂತೆ ವಲಯಯಲ್ಲಿ ಕೆಲಸ ಮಾಡುತಿದ್ದೇನೆ. ನನ್ನ ಜೊತೆ ಚಾಸಾ-6 ಸಹ ಕೆಲಸ ಮಾಡುತ್ತಾರೆ.

ದಿನಾಂಕ 23-07-2022 ರಂದು ಬೆಳಿಗ್ಗೆ 11.00 ಗಂಟೆಗೆ ನಮ್ಮ ವಲಯ ಅರಣ್ಯ ಅಧಿಕಾರಿಗಳು ನನಗೆ ಹಾಗೂ ಚಾಸಾ-6 ರವರಿಗೆ ಶನಿವಾರಸಂತೆ ಪೊಲೀಸ್ ಠಾಣೆಗೆ ಹೋಗಲು ಸೂಚಿಸಿದ್ದು, ಅದರಂತೆ ನಾನು ಅಲ್ಲಿಗೆ ಹೋದಾಗ ಚಾಸಾ-24 ಇದ್ದರು. ಅಲ್ಲಿ ಫ್ರಾಸಾ-1 ಸಹ ಇದ್ದರು. ಫ್ರಾಸಾ-1 ನಾಕಲಗೂಡು ಮನೆಯ ಬಳಿ ಆರೋಪಿತರು ತನಗೆ ಹಲ್ಲೆ ಮಾಡಿದ್ದಾರೆ ಎಂದು ದೂರು ನೀಡಿದ್ದು, ಅದರಂತೆ ಸ್ಥಳ ಮಹಜರ್ ಮಾಡಬೇಕು ಎಂದು ಹೇಳಿ ನಮ್ಮನ್ನು ಜೀಪಿನಲ್ಲಿ ನಾಕಲಗೂಡಿಗೆ ಕರೆದುಕೊಂಡು ಹೋದರು. ಅಲ್ಲಿ ಒಂದು ಹೊಸ ಶೀಟ್ ಮನೆ ಕಟ್ಟಿದ್ದು ಅಲ್ಲಿ ಜೀಪು ನಿಲ್ಲಿಸಿದ್ದರು. ಫ್ರಾಸಾ-1 ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ಪರಿಶೀಲಿಸಿ ಮಹಜರ್ ತಯಾರಿಸಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ತಯಾರಿಸಿದ್ದ ಮಹಜರ್ ಆಗಿದ್ದು, ಅದನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯ ನಿಪಿ -2(ಬಿ ) ಎಂದು ಗುರುತಿಸಲಾಯಿತು. ನಿಪಿ-2

ರಲ್ಲಿ ನಕಾಶೆಯನ್ನು ತಯಾರಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಆ ಬಳಿಕ ನಾವು ವಾಪಸ್ಸು ಕಛೇರಿಗೆ ಹೋಗಿದ್ದು ಪುನಃ 2.00 ಗಂಟೆ ಸಮಯಕ್ಕೆ ನಮ್ಮನ್ನು ಠಾಣೆಗೆ ಬರಲು ಹೇಳಿದ್ದರು. ಫ್ರಾಸಾ-1 ಘಟನಾ ಸಂದರ್ಭದಲ್ಲಿ ತಾನು ಧರಿಸಿದ್ದ ಒಂದು ಸ್ವೆಟರ್ ಹಾಗೂ ನೈಟಿಯನ್ನು ಹಾಜರುಪಡಿಸಿದ್ದು,ಆ ಸಂದರ್ಭದಲ್ಲಿ ಪೊಲೀಸರು ಅವುಗಳನ್ನು ಅಮಾನತ್ತುಪಡಿಸಿಕೊಂಡು ಮಹಜರ್ ತಯಾರಿಸಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಆಸಂದರ್ಭದಲ್ಲಿ ತಯಾರಿಸಿದ್ದ ಮಹಜರ್ ಆಗಿದ್ದು, ಅದನ್ನು ನಿಪಿ-3 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯ ನಿಪಿ-3 (ಬಿ) ಎಂದು ಗುರುತಿಸಲಾಯಿತು. ನಿಪಿ-3 ರ ಸಂದರ್ಭದಲ್ಲಿ ಪೊಲೀಸರು ಫೋಟೊಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-4 ಎಂದು ಈಗಾಗಲೇ ಗುರುತಿಸಲಾಗಿದೆ.

ದಿನಾಂಕ 12-08-2022 ರಂದು ಪೊಲೀಸರು ನಮ್ಮನ್ನು ಪುನಃ ಠಾಣೆಗೆ ಬರಲು ಹೇಳಿದ್ದುನಾವು ಠಾಣೆಗೆ ಹೋದಾಗ ಆರೋಪಿ ಮಂಜುನಾಥ್ ಠಾಣೆಯಲ್ಲಿ ಇದ್ದು, ತಾನು ಕೃತ್ಯಕ್ಕೆ ಉಪಯೋಗಿಸಿದ್ದ ದೊಣ್ಣೆಯನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ್ದು ಅದರಂತೆ ನಾವು ಈ ಮೊದಲು ಹೋಗಿದ್ದ ಫ್ರಾಸಾ-1 ರವರ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿ ಮನೆಯ ಹತ್ತಿರ ಇರುವ ಬೇಲಿಯ ಬಳಿಯಿಂದ ಒಂದು ದೊಣ್ಣೆಯನುನ ತಂದು ಹಾಜರುಪಡಿಸಿ ಸದರಿ ದೊಣ್ಣೆಯಿಂದಲೇ ತಾನು ಫ್ರಾಸಾ-1 ರವರ ಮೇಲೆ ಹಲ್ಲೆ ಮಾಡಿರುವುದಾಗಿ ಹೇಳಿದ ಮೇರೆಗೆ ಪೊಲೀಸರು ಅದನ್ನು ಅಮಾನತ್ತುಪಡಿಸಿಕೊಂಡು ಮಹಜರ್ ತಯಾರಿಸಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಆಸಂದರ್ಭದಲ್ಲಿ ತಯಾರಿಸಿದ್ದ ಮಹಜರ್ ಆಗಿದ್ದು, ಅದನ್ನು ನಿಪಿ-8 ಎಂದು ಸಾಕ್ಷಿ ಸಹಿಯ ನಿಪಿ-8 (ಎ) ಎಂದು ಗುರುತಿಸಲಾಯಿತು. ನಿಪಿ-8 ರ ಸಂದರ್ಭದಲ್ಲಿ ಪೊಲೀಸರು ಫೋಟೊಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿ ಮಂಜುನಾಥ ಈ ದಿನ ನ್ಯಾಯಾಲಯದಲ್ಲಿ ಉಪಸ್ಥಿತರು ಇದ್ದು, ಸಾಕ್ಷಿ ಅವರನ್ನು ಗುರುತಿಸಿರುತ್ತಾರೆ.

ನನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡ ಫ್ರಾಸಾ-1 ರವರ ಬಟ್ಟೆಗಳು ಹಾಗೂ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದೊಣ್ಣೆ ಆರೋಪಿ ನಮ್ಮ ಸಮಕ್ಷಮದಲ್ಲಿ ಹಾಜರುಪಡಿಸಿದ್ದ ದೊಣ್ಣೆಯಾಗಿದ್ದು ಅದನ್ನು ಮು.ಮಾ-1 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ರೀತಿ ಈಗ ನಾನು ನೋಡುತ್ತಿರುವ ಫ್ರಾಸಾ-

1 ರವರು ಹಾಜರುಪಡಿಸಿದ್ದ ಸ್ವೆಟರ್ ಹಾಗೂ ನೈಟಿಯನ್ನು ಮು.ಮಾ-2 ಮತ್ತು 3 ಎಂದು ಈಗಾಗಲೆ ಗುರುತಿಸಲಾಗಿದೆ.

**<u>ಪಾಟೀಸವಾಲು- 1, 3, 4 ನೇ ಆರೋಪಿ ಪರವಾಗಿ ಶ್ರೀ. ಕೆ.ಎಸ್.ಕೆ. ವಕೀಲರಿಂದ:</u>**

ಪೊಲೀಸರು ನನಗೆ ಮಹಜರ್ ಗೆ ಬರಲು ಪ್ರತ್ಯೇಕವಾಗಿ ನೋಟಿಸ್ಸು ನೀಡಿರಲಿಲ್ಲ. ಅದೇ ರೀತಿ ನಮ್ಮ RFO ರವರು ಮಹಜರ್ ಗೆ ಹೋಗಿ ತನಿಖೆಗೆ ಸಹಕರಿಸಬೇಕು ಎಂದು ಪ್ರತ್ಯೇಕವಾಗಿ ನೋಟಿಸ್ಸು ನೀಡಿರಲಿಲ್ಲ. ಎರಡು ದಿನಗಳಲ್ಲೂ ಮಹಜರ್ ಗೆ ಹೋಗುವ ಸಂದರ್ಭದಲ್ಲಿ ನಮ್ಮ ಕಛೇರಿಯ ಮೂಮೆಂಟ್ ಪುಸ್ತಕದಲ್ಲಿ ನಾನು ಹೋದ ಬಗ್ಗೆ ಉಲ್ಲೇಖಿಸಿದ್ದೇನೆ. ಈ ಮೂರು ಮಹಜರ್ ಗಳಲ್ಲಿ ನನ್ನ ಸಹಿ ಅಲ್ಲದೆ ಪೊಲೀಸರು ನನ್ನ ಹೇಳಿಕೆಯನ್ನು ಸಹ ಬರೆದುಕೊಂಡಿದ್ದಾರೆ. ಸದರಿ ಹೇಳಿಕೆಯಲ್ಲಿ ನಾನು ನಮ್ಮ ಕಛೇರಿಯ ಮೂಮೆಂಟ್ ರಿಜಿಸ್ಟರ್ ನಲ್ಲಿ ಸಹಿ ಆ ಬಳಿಕ ಮಹಜರ್ ಗೆ ಬಂದಿದ್ದೇನೆ ಎಂದು ಬರೆದಿಲ್ಲ.

ಕೃತ್ಯ ನಡೆದ ಜಾಗವನ್ನು ಫ್ರಾಸಾ-1 ತೋರಿಸುವ ಸಂದರ್ಭದಲ್ಲಿ ನಾವು ಸದರಿ ಮನೆಯ ಸುತ್ತಮುತ್ತ ನೋಡಿದ್ದೇವೆ. ಆ ಸಂದರ್ಭದಲ್ಲಿ ಮು.ಮಾ-1 ರ ದೊಣ್ಣೆಯನ್ನು ನಾನು ಗಮನಿಸಿರಲಿಲ್ಲ. ಫ್ರಾಸಾ-1 ಸದರಿ ದೊಣ್ಣೆಯಿಂದ ಹೊಡೆದು ಆ ದೊಣ್ಣೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದರು ಎಂದು ಹೇಳಿರಲಿಲ್ಲ. ಮಂಜುನಾಥ ರವರು ಇದೇ ದೊಣ್ಣೆಯಿಂದ ಹೊಡೆದಿದ್ದಾರೆ ಎಂಬಂತೆ ಫ್ರಾಸಾ-1 ರವರನ್ನು ಪೊಲೀಸರು ಮನೆಯ ಬಳಿ ಕೇಳಿದ್ದಾರೆ. ದೊಣ್ಣೆಯನ್ನು ಅಮಾನತ್ತುಪಡಿಸಿಕೊಳ್ಳುವ ಸಂದರ್ಭದಲ್ಲಿ ಮಾಡಿದ ಮಹಜರ್ ಗೆ ಫ್ರಾಸಾ-1 ಸಹಿ ಹಾಕಿಲ್ಲ. ಆರೋಪಿ ಮಂಜುನಾಥ ರವರು ಫ್ರಾಸಾ-1 ರವರ ಮನೆಯ ಬಳಿಯಿಂದ ದೊಣ್ಣೆಯನ್ನು ತೋರಿಸಿಕೊಡುವ ಸಂದರ್ಭದಲ್ಲಿ ಫೋಟೊ ತೆಗೆದಿದ್ದಾರೆ. ನಿಪಿ-9 ರ ಫೋಟೊಗಳಲ್ಲಿ ಆರೋಪಿಯನ್ನುದೊಣ್ಣೆಯನ್ನು ತೋರಿಸಿಕೊಡುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ. ಮು.ಮಾ-1 ರ ದೊಣ್ಣೆಯನ್ನು ಪೊಲೀಸರೆ ತೆಗೆದುಕೊಂಡು ನನ್ನನ್ನು ನಿಲ್ಲಿಸಿ ಫೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಮಂಜುನಾಥ ರವರು ದೊಣ್ಣೆಯನ್ನುತೋರಿಸಿ ಸದರಿ ದೊಣ್ಣೆಯಿಂದ ತಾನು ಫ್ರಾಸಾ-1 ರವರಿಗೆ ಹಲ್ಲೆ ಮಾಡಿದ್ದೇನೆ ಎಂದುಹೇಳಿರಲಿಲ್ಲ ಮತ್ತು ಫ್ರಾಸಾ-1 ಸಹ ಕೃತ್ಯ ನಡೆದ ಸ್ಥಳವನ್ನು ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಾಗಿದ್ದ ಕಾರಣ ಸರ್ಕಾರಿ ನೌಕರರಿಗೆ ಸಹಾಯ ಮಾಡದಿದ್ದರೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಕಾರಣಕ್ಕಾಗಿ ಚಾಸಾ-24 ನಿರ್ದೇಶಿಸಿದ ಪ್ರಕಾರ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ

ಸರಿಯಲ್ಲ. ಎಲ್ಲಾ ಮಹಜರ್ ಗಳಿಗೆ ನಾನು ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರ ಫೋಟೊಗಳಲ್ಲಿ ಫ್ರಾಸಾ-1 ಕಾಣುತ್ತಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ